The Hon'ble Sri T. MARIAPPA.—That is what I said. It is food only for non-vegetarians.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಆಹಾರದ ಅಭಾವ ಇಷ್ಟು ಹೆಚ್ಚಾಗಿರುವಾಗ ಕುರಿ ಮತ್ತು ಕೋಳಿಗಳನ್ನು ಹೆಚ್ಚಿಗೆ ಬೆಳೆಸಲು ಗಮನಕೊಟ್ಟು ಅವುಗಳನ್ನು ಅಭಿವೃದ್ಧಿಗೆ ತರುವುದು ಅವಶ್ಯಕವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಹಳ ಅವಶ್ಯಕ.

ಜನಾಬ್ ಜೆ. ಮಹಮದ್ ಇಮಾಂರವರು.—ಇದುವರೆಗೂ ತಾವು ಈ ಆಹಾರ ಹೆಚ್ಚಿಸುವ ಯೋಜನೆ ಪ್ರಾರಂಭವಾಗಿನಿಂದ ಈ ಕೋಳಿ ಮತ್ತು ಕುರಿಗಳನ್ನು ಬೆಳೆಸಲಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೆಸರಘಟ್ಟದಲ್ಲಿ ಒಂದು ಸಾವಿರ layer ಗಳನ್ನುಳ್ಳ ಒಂದು ಕೋಳಿ ಫಾರಮ್ಮನ್ನು ಏರ್ಪಡಿಸಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅಲ್ಲಿ ಬೆಳೆದ ಒಳ್ಳೆಯ ತಳಿಗಳನ್ನು ಚಿತ್ರದುರ್ಗ ಮುಂತಾದ ಕಡೆಗಳಿಗೇನಾದರೂ ಸರಬರಾಯಿ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾರು ಕೇಳಿದರೂ ಸರಬರಾಜು ಮಾಡುವುದಕ್ಕೆ ತಯಾರಾಗಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಎಷ್ಟು ಜನ ಹೋಗಿ ಬಂದು ತೆಗೆದುಕೊಂಡು ಹೋಗಿದ್ದಾರೆ?

The Hon'ble Sri H. C. DASAPPA.—10,000 hatching eggs have been distributed.

ಜನಾಬ್ ಜೆ. ಮಹಮದ್ ಇಮಾಂರವರು.—ಕೋಳಿಗಳಿಗೆ ಸಾಮಾನ್ಯವಾಗಿ ಒಂದು ತರಹ ಕಾಲರಾರೋಗ ತಗಲಿ ಹಿಂಡುಗಟ್ಟಲೆ ನಶ್ತು ಹೋಗಿ ಕೋಳಿಗಳಿಗೆ ಅಭಾವ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರಾಣಿಕೆಟ್ ಎಂಬ ರೋಗ ಬಂದು ಅನೇಕ ಕೋಳಿಗಳು ಸಾಯುತ್ತಿವೆಯೆಂಬುದು ಗೊತ್ತು. ಅದಕ್ಕಾಗಿ ಕೋಳಿಗಳಿಗೆ ಇನಾಕ್ಯುಲೇಷನ್ ಮಾಡಬೇಕೆಂದು ಮಾಡಿದ್ದೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ನನಗೆ ತಿಳಿದಮಟ್ಟಿಗೆ ಹಳ್ಳಿಗಳಕಡೆ ಹೋಗಿ ಯಾರೂ ಇನಾಕ್ಯುಲೇಷನ್ ಮಾಡುತ್ತಿಲ್ಲ! ಈ ವಿಷಯದಲ್ಲಿ ಸಾಕಾದಷ್ಟು ನಿರೋಧಕ ಕಾರ್ಯಕ್ರಮ ನಡೆಯುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲೆಲ್ಲಿ ಜನರು ಬಂದು ವೆಟರಿನರಿ ಆಫೀಸರಿಗೆ ತಿಳಿಸುತ್ತಾರೋ ಅಲ್ಲಗೆ ಹೋಗಿ ಕಾರ್ಯಕ್ರಮ ತಗೆದುಕೊಂಡಿದ್ದಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಜನರು ಬಂದು ವೆಟರಿನರಿ ಆಫೀಸರಿಗೆ ತಿಳಿಸಬೇಕೆಂದು ಮಾಡುವುದರ ಬದಲು, ಈ ಆಫೀಸರುಗಳೇ ಹೋಗಿ ಎಲ್ಲಾಕಡೆಯಲ್ಲೂ ಇನಾಕ್ಯುಲೇಷನ್ ಮಾಡುವಂತೆ ಏರ್ಪಡಿಸುವುದು ನೂಕ್ತವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಖರ್ಚು ಪೂರಾ ಆಗುತ್ತದೆ. ಎಲ್ಲ ಇನಾಕ್ಯುಲೇಷನ್ ಮಾಡಬೇಕೆಂದು ತಿಳಿಸಿದರೆ ಅಲ್ಲಗೆ ಬಂದು ಮಾಡುತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಕೋಳಿಗಳಿಗೆ ಈ ರೋಗ ಬಂದು ತಕ್ಷಣ ಒಂದೇ ಸಲಕ್ಕೆ 'ಚೆಟ್' ಆಗುತ್ತವೆ. ತಿಳಿಸುವುದಕ್ಕೂ ಕಾಲವಿರುವುದಿಲ್ಲ. ಆದ್ದರಿಂದ ಸರಕಾರದಲ್ಲಿ ಮೊದಲೇ ತಕ್ಕ ನಿರೋಧಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೇನಾದರೂ ಏರ್ಪಾಡು ಮಾಡುತ್ತೀರಾ?

The Hon'ble Sri T. MARIAPPA.—The matter will be considered.

Activities at Hessarghatta Grass Farm.

*Q.—95. Sri K. PUTTASWAMY (Mandya District—General).—

Will the Government be pleased to state :—

(*a*) the activities at Hessarghatta Farm ;

(*b*) whether it has been re-organised recently by converting the same into composite farm and centralising all activities ?

A.—The Hon'ble Sri T. MARIAPPA (Home Minister).—

(*a*) The following schemes are under operation at the Hessarghatta Grass Farm:—

(1) Large Scale Poultry Farming.
(2) Remount Breeding.
(3) Pony Breeding.
(4) Sheep Breeding.
(5) Boarding of Dry Cattle.
(6) Dairying.
(7) Bee-keeping.
(8) Fisheries.
(9) Calf Nursery.

(*b*) Yes.

Sri K. PUTTASWAMY.—What were the activities at the Hessarghatta Farm before it was converted into a composite farm ?

The Hon'ble Sri T. MARIAPPA.—It was mainly a grass farm and there were also remount breeding and pony breeding.

Sri K. PUTTASWAMY.—Is the grass farm being continued in the same scale?

The Hon'ble Sri T. MARIAPPA.—Yes, it has to be continued.

Sri K. PUTTASWAMY.—What was the expenditure on the establishment when it was only a grass farm ?

The Hon'ble Sri T. MARIAPPA.—I want notice.

Sri K. PUTTASWAMY.—Were there any cows when it was purely a grass farm ?

The Hon'ble Sri T. MARIAPPA.—When it was purely a grass farm there were no cows.

Sri K. PUTTASWAMY.—What are the charges incurred on the establishment when it is converted into a composite farm ?

The Hon'ble Sri T. MARIAPPA.—I want notice. You can refer to the Budget.

Sri K. PUTTASWAMY.—Was the farm self-supporting last year ?

The Hon'ble Sri T. MARIAPPA.—No, not on all items. It is an experimental farm. It cannot be self-supporting on all items. Poultry farm is going to become self-sufficient very shortly.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ "(5) ಹಾಲು ಕರೆಯದೆ ಇರತಕ್ಕ ಜಾನುವಾರುಗಳನ್ನಿಟ್ಟುಕೊಂಡು ನಲಹುವುದು" ಎಂದಿದೆ. ಇವು ಸರ್ಕಾರಿ ದನಗಳೋ ಅಥವ ಖಾಸಗಿಯವರಿಗೆ ಸೇರಿದವೊ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಾಸಗಿ ಜನರೂ ಇಡುತ್ತಾರೆ; ಅವರಿಂದ ಹಣ ತೆಗೆದುಕೊಂಡು ನಾವೂ ಇಟ್ಟುಕೊಳ್ಳುತ್ತೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನೂ ಪೂರ್ತಿಯಾಗಿ ಅವರು ಕೊಡುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಪೂರ್ತಿ ಕೊಡುತ್ತಾರೆ; ನಮಗೆ ಸ್ವಲ್ಪ ಉಳಿದೂ ಉಳಿಯುತ್ತದೆ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಹಸುಗಳನ್ನು ಖಾಸಗಿ ಜನರು ಕಳುಹಿಸಿದರೆ ಎಷ್ಟು ಹಣ ಕೊಡುತ್ತಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಜಿ. ಎ. ಆಚಾರ್ಯರು.—ಖಾಸಗಿ ಜನರು ಹುಲ್ಲು ಸಿಕ್ಕುವುದಿಲ್ಲವೆಂದು ಅಲ್ಲಿಗೆ ಕಳುಹಿಸುತ್ತಾರೆ; ಅಲ್ಲಿ ಈ ದನಗಳನ್ನಿಡಲು ಕಟ್ಟಡ ಅಥವ ಗುಡಿಸಲುಗಳಿವೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಹುಲ್ಲಿನ ಗುಡಿಸಲುಗಳಿವೆ. ಕರ್ನಾರು ಷೀಟುಗಳನ್ನು ಹಾಕಿ ಕಟ್ಟಬೇಕೆಂದು ತೀರ್ಮಾನವಾಗಿದೆ; ಅದಷ್ಟು ಬೇಗ ಮಾಡುತ್ತಾರೆ.

ಶ್ರೀ ಜಿ. ಎ. ಆಚಾರ್ಯರು.—ಈಗ ಎರಡು ತಿಂಗಳಿಂದ ಖಾಸಗಿ ಜನರು ಅಲ್ಲಿಗೆ ಹಸುಗಳನ್ನು ಕಳುಹಿಸಿದರೆ ಅವರು ಇಟ್ಟುಕೊಳ್ಳದೇಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ; ಆದರೆ ಈಗ ಅಲ್ಲಿ 500 ದನಗಳನ್ನು ಇಟ್ಟುಕೊಳ್ಳಲು ಸಾಧ್ಯ ಏದೆ. ಅದಕ್ಕಿಂತ ಹೆಚ್ಚು ಬಂದರೆ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಎ. ಆಚಾರ್ಯರು.—ಅಲ್ಲಿ ಹಸುಗಳಿಗೆ ರೋಗ ಬಂದರೆ ಯಾರು ನೋಡಿಕೊಳ್ಳುವವರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವೆಟರಿನರಿ ಇನ್‌ಸ್ಪೆಕ್ಟರಿದ್ದಾರೆ; ಡಿಸ್ಪೆಸರಿ ಇದೆ.

ಶ್ರೀ ಜಿ. ಎ. ಆಚಾರ್ಯರು.—ಅದಕ್ಕೆಲ್ಲ ಆಗುವ ಖರ್ಚು ಯಾರು ಕೊಡುತ್ತಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ದನಗಳನ್ನಿಟ್ಟುಕೊಳ್ಳಲು ಹಣ ಕೊಡಬೇಕು ಅಷ್ಟೆ; ಇದೆಲ್ಲ ದನ್ನೂ ನಾವೇ ಬಿಟ್ಟ ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಉತ್ತರದಲ್ಲಿ ಎಂಟು ಒಂಬತ್ತು ಬಾಬುಗಳಿವೆ. ಇವುಗಳಲ್ಲಿ ಜೇನು ಸಾಕುವುದರಲ್ಲಿ ಎಷ್ಟು ನಷ್ಟವಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಷ್ಟ ಎಂದು ಹೇಳುವುದಕ್ಕಾಗುವುದಿಲ್ಲ; ಎಷ್ಟು ಹೆಚ್ಚಾಗಿ ಜೇನು ಉತ್ಪತ್ತಿಯಾಡರೆ ಅಷ್ಟು ಫಾಯಿದೆ ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.— ಹಾಗಾದರೆ ಇದು self-supporting ಆಗಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಈಗ ಹೇಳಲಾರೆ.

ಶ್ರೀ ಬಿ. ಹುಚ್ಚೇಗೌಡರು.—ಖಾನು ಸಾಕುವುದಕ್ಕೆ ಎಷ್ಟು ಸಿಬ್ಬಂದಿ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಣ್ಣ ಸಿಬ್ಬಂದಿ ಇಟ್ಟಿದ್ದೇವೆ; ಇದನ್ನು ಒಂದು ಪ್ರಯೋಗ ಪರೀಕ್ಷಾರ್ಥವಾಗಿ ಇಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಹಾಲು ಕರೆಯದೆ ಇರುವ ದನಗಳನ್ನು ಇಟ್ಟುಕೊಳ್ಳುವುದರಿಂದ ಏನೂ ನಷ್ಟವಾಗುತ್ತಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಷ್ಟವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹೈನದ ಕೆಲಸ (dairy) ನಡೆಯುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಡೆಯುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಸಿಂಧಿ ದನಗಳು ಎಷ್ಟಿವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ನೂರಿವೆ.

ಶ್ರೀ ಬಿ. ಹುಚ್ಚೇಗೌಡರು.—ಇನ್ನೂ ಹೆಚ್ಚಾಗಿ ತರಿಸಲು ಪ್ರಯತ್ನ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಿಕ್ಕುವುದು ಕಷ್ಟ, ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ ಹುಚ್ಚೇಗೌಡರು.—ಇದು self-supporting ಆಗಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, cattle breeding ಇದ್ದರೆ ಹಾಗಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲ cattle breeding ಕೂಡ ಇಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೌದು, ಅದನ್ನೂ ಇಟ್ಟುಕೊಳ್ಳಬೇಕೆಂದು ಉದ್ದೇಶವಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಳ್ಳಿಕಾರ ಜಾತಿಯನ್ನು ಇಡಬೇಕೆಂಬ ಉದ್ದೇಶವಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೌದು, ಇದಕ್ಕಾಗಿ ಒಂದು ಯೋಜನೆ ಮಾಡಿ, ಅದು ಮಂಜೂರಾಗಿದೆ.

ಶ್ರೀ ಬಿ ಹುಚ್ಚೇಗೌಡರು.—ಪ್ರಯೋಗಾರ್ಥವಾಗಿ ಮಾಡಿದರೆ self-supporting ಆಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಾರಂಭದಲ್ಲಿ ನೂರು ದನಗಳನ್ನು ಮಾತ್ರ ಇಟ್ಟುಕೊಂಡು ಕೆಲಸ ಮಾಡುತ್ತೇವೆ; ಪ್ರಯೋಗ ಕಾಲದಲ್ಲಿ self-supporting ಆಗುವುದು ಕಷ್ಟ.

ಶ್ರೀ ಬಿ. ಹುಚ್ಚೇಗೌಡರು.—ರೇಸ್ ಕುದುರೆಗಳ ಬ್ರೀಡಿಂಗ್ ಕ್ಷೇತ್ರವನ್ನೂ ಇಲ್ಲಿ ಮಾಡಿದ್ದೀರಾ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಇಲ್ಲ, ಪೋನಿಗಳನ್ನು ಸಾಕುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.— ಕುಣಿಗಲನಲ್ಲಿರುವ ರೇಸ್ ಹಾರ್ಸಸ್ ಕೂಡ ಇಲ್ಲಿ ಇಟ್ಟರೆ ಖರ್ಚು ಕಡಿಮೆ ಯಾಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡು ವುದಕ್ಕಾಗುವುದಿಲ್ಲ. ಇದಕ್ಕೆ ಕುಣಿಗಲೇ ಸರಿಯಾದ ಜಾಗವೆಂದು ರೇಸ್ ಹಾರ್ಸಸ್ ಪ್ರವೀಣರು ಹೇಳಿದ್ದಾರೆ.

ಶ್ರೀ ಬಿ ಹುಚ್ಚೇಗೌಡರು.—ಇದು ಹಣ ಬರುವ ವಿಷಯವಾದುದರಿಂದ ಸರಿಯಾಗಿ ಏರ್ಪಾಡು ಮಾಡು ವುದು ಒಳ್ಳೆಯದಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈದು self-supporting ಆಗಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು (ಚಿತ್ರ ದುರ್ಗ ಜಿಲ್ಲೆ).—ಪಾಶ್ಚಿಮಾತ್ಯ ದೇಶಗಳಲ್ಲಿ ಇಂತಹ ಫಾರಂಗಳನ್ನು ಮಾಡಿರುವಕಡೆ ಅವು ಲಾಭದಾಯಕ ವಾಗಿ ನಡೆಯುತ್ತಿವೆ ಎಂಬುದು ಗೊತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Research Stations ಲಾಭದಾಯಕವಾಗಿ ಆಗುವುದಿಲ್ಲವೆಂಬುದು ಗೊತ್ತು. ಆದರೆ breeding ಕೂಡ ಇಟ್ಟುಕೊಂ ಡಿರುವ ಕಡೆ ಲಾಭದಾಯಕವಾಗಿರಬಹುದು.

Sri V. M. MASCARENHAS (Retroceded Area—General).—Through what agency are the products of this farm marketed?

The Hon'ble Sri T. MARIAPPA.—For example eggs are sent to Bangalore and marketed through a Co-operative Society; in respect of milk, we call for tenders and the tendered contractor takes the milk and sells it in Bangalore; pony breeding—only remount breeding,—we supply it to the military and the Government of India, now that the lancers are transferred to the Government of India.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ) ಹೆಸರಘಟ್ಟಫಾರಂನ ವಿಸ್ತೀರ್ಣ ಎಷ್ಟಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಮೂರು ಸಾವಿರ ಎಕರೆಯಷ್ಟಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಕೆಲಸಕ್ಕೆ ಅಷ್ಟೊ ಬೇಕಾಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಷ್ಟೊ ಬೇಕಾಗುತ್ತದೆ; ನಮ್ಮ ಕೆಲಸ ಹೆಚ್ಚಾಗಬೇಕಾದರೆ. ಇದರ ಜೊತೆಗೆ ಅಲ್ಲಿ ಆಹಾರ ಧಾನ್ಯವನ್ನೂ ಬೆಳೆಯು ತ್ತೇವೆ.

Horticultural Farm at Maddur.

*Q.—185. **Sri S. RANGARAMIAH** (Mysore District—General).—

Will the Government be pleased to state :—

(*a*) when the Horticultural Farm at Maddur was opened by the Government;

(*b*) the person who is in-charge of it and the amount spent for the staff each year for the last three years;

(*c*) the income and expenditure of the farm for the last five years;

(*d*) the nature of crops grown therein and where they are marketed?

A.—**The Hon'ble Sri T. MARIAPPA** (Home Minister).—

(*a*) 1942.

(*b*) The Manager.

	Rs.	a.	p.
1947-48 ...	4,666	0	0
1948-49 ...	4,345	3	0
1949-50 ...	4,963	0	0

(*c*)—

	Income.			*Expenditure.*		
	Rs.	a.	p.	Rs.	a.	p.
1945-46 ...	6,206	4	0	7,422	4	9
1946-47 ...	5,845	0	0	7,634	0	0
1947-48 ...	3,853	0	0	6,702	0	0
1948-49 ...	6.931	6	3	11,310	11	0
1949-50 ...	2,794	15	0*	9,406	8	0

(*d*) Both Indian and European vegetables and fruits such as Papaya and Melon are grown. The vegetables are sold both in the Sales Depot attached to the Farm and also in Maddur Market and fruits are sold at the Maddur Railway Station.

ಶ್ರೀ ಎಸ್. ರಂಗರಾಮಯ್ಯನವರು.—ಮದ್ದೂರಿನ ಫಲಪುಷ್ಪ ವ್ಯವಸಾಯ ಕ್ಷೇತ್ರದ ವಿಸ್ತೀರ್ಣವೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 52 ಎಕರೆ; ಖಚಿತವಾಗಿ ಹೇಳಲು ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಎಲ್ಲ ಭಾಗಕ್ಕೂ ನೀರಿನ ಅನುಕೂಲ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಸ್ವಲ್ಪ ಭಾಗಕ್ಕೆ ನೀರು ಸರಬರಾಯಿಯಾಗುತ್ತದೆ. ಎಲ್ಲಕ್ಕೂ ಅನುಕೂಲಮಾಡಲು ಪಂಪು ಹಾಕಿಸಬೇಕೆಂದು ಉದ್ದೇಶ ವಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ನೀರಾವರಿ ಆಗಿರುವುದೆಷ್ಟು, ಆಗದೇಯಿರುವುದೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿಯ ಮ್ಯಾನೇಜರ್‌ಗೆ ನಂಬಳವೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಡ್ಡೆಟ್ಟಿನಲ್ಲಿದೆ; ನೋಟೀಸು ಕೊಟ್ಟರೆ ಹೇಳುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರ ಕೈಕೆಳಗೆ ಸಿಬ್ಬಂದಿ ಎಷ್ಟು ಜನರಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್; ಖಚಿತ ಎಷ್ಟೆಂದು ಹೇಳಿದ್ದೇನೆ, ಬಡ್ಡೆಟ್ಟಿನಲ್ಲಿದೆ.

* Excluding the cost of free supply of plants to Vanamahotsavam.